KARNATAKA LEGISLATIVE ASSEMBLY

Thursday, 28th February 1974/Phalguna 9, 1895 S.E.

The House met in the Assembly Chamber, Vidhana Soudha, at one of the Clock.

MADAM SPEAKER (Smt. K. S. Nagarathnamma), in the Chair.

STARRED QUESTIONS

(to which oral answers were given)

SMOKING IN K. S. R. T. C. BUSES

74. SRI J. S. AMMANNAVAR (Sadalga).— Will the Minister for Transport and Housing be pleased to state:--

(*a*) whether there is any rule which prohibits passengers from smoking in the K.S.R.T.C. buses;

(*b*) if so, whether it has come to the notice of the Government that most of the passengers are smoking in the buses causing nuisance to the co-passengers particularly ladies and children;

(*c*) if there is no rule to prohibit smoking in the buses whether the Government is considering to frame such a rule ?

SRI K. H. RANGANATH (Minister for Transport and Housing) : —

(*a*) Yes

(*b*) No

(*c*) The question does not arise in view of answer to clause (*a*) above.

ಶ್ರೀ ಜೆ. ಎಸ್. ಅಪ್ಪಣ್ಣವರ್ :....ಬಸ್ಸುಗಳಲ್ಲಿ ಧೂಮಪಾನ ಮಾಡುವುದು ನಡೆಯುತ್ತಿದೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ನೋಡುವ ನಲುವಾಗಿ ಒಂದು ಮಿಷಿನರಿ ಏನಾದರೂ ಇದೆಯೇ ?

*ಶ್ರೀ ಕೆ. ಎಚ್. ರಂಗನಾಥ್ : ಪ್ರತಿ ಬಸ್ಸಿನಲ್ಲಿಯೂ ಧೂಮಪಾನ ಮಾಡಬಾರದೆಂಬ ಬೋರ್ಡ್ ಇರುತ್ತದೆ. ಅದನ್ನು ಪ್ರಯಾಣಿಕರು ನೋಡಬೇಕು. ಆದರೆ ಇದಕ್ಕಾಗಿ ಒಂದು ಮೆಷಿನರಿಯನ್ನು ನೇಮಕ ಮಾಡುವುದು ಎಂದರೆ ಅದು ಬಹುಶಃ ಪ್ರಯಾಸದ ಕೆಲಸವಾಗಬಹುದೆಂಬುದು ಸರ್ಕಾರದ ಅಭಿಪ್ರಾಯ.

ಶ್ರೀ ಜೆ. ಎಸ್. ಅಪ್ಪಣ್ಣವರ್ : ಕಂಡಕ್ಟರ್ ಮತ್ತು ಡ್ರೈವರ್ ಸಹ ಧೂಮಪಾನ ಮಾಡುವುದನ್ನು ನಾವು ಕಾಣುತ್ತಿದ್ದೇವೆ; ಆದರೂ ಅದು ಸರ್ಕಾರದ ನಜರಿಗೆ ಬಂದಿಲ್ಲವೆಂದರೆ ಹೇಗೆ ? ಇದನ್ನು ಯಾವ ರೀತಿಯಾದರೂ ಬಂದು ಮಾಡಬೇಕು. ಮಕ್ಕಳು ಧೂಮಪಾನ ಮಾಡದಿದ್ದರೂ ಸಹ ಪ್ರಯಾಣಿಕರು ಮಾಡುವ ಧೂಮಪಾನದ ಹೊಗೆ ಅವರ ಶರೀರದಲ್ಲಿ ಸೇರುತ್ತಿದೆ ಎಂಬ ರಿಪೋರ್ಟ್ ಬಂದಿದೆ. ಈ ದೃಷ್ಟಿಯಿಂದ ಇದನ್ನು ತಪ್ಪಿಸುವುದಕ್ಕೆ ಕಾರ್ಯಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್: ಕಂಡಕ್ಟರ್ ಮತ್ತು ಡ್ರೈವರ್ ಏನಾದರೂ ಧೂಮಪಾನ ಮಾಡಿದರೆ ಅವರ ಮೇಲೆ ತೀವ್ರವಾದ ಕಾರ್ಯಕ್ರಮ ಕೈಕೊಳ್ಳುತ್ತೇವೆ.

SRI N. A. PAWASHE: Whether the Conductors are authorised to take action against persons who contravene this rule ?

SRI K. H. RANGANATH: It is only a request that people should not smoke.

ಶ್ರೀ ಹಂಜಿ ಶಿವಣ್ಣ : ಇತ್ತೀಚೆಗೆ ಬಸ್‌ಗಳಲ್ಲಿ ಧೂಮಪಾನ ಮಾಡಬಾರದೆಂಬ ಬೋರ್ಡ್‌ನ್ನು ಹಾಕುತ್ತಿಲ್ಲ. ಇದನ್ನು ಗಮನಿಸಬೇಕು ಮತ್ತು ಮಾನ್ಯ ಅಪ್ಪಣ್ಣನವರು ಹೇಳಿದಂತೆ ಕಂಡಕ್ಟರ್ ಮತು ಡ್ರೈವರ್‌ಗಳು ಧೂಮಪಾನ ಮಾಡುವುದು ಜಾಸ್ತಿಯಾಗಿದೆ. ಇದನ್ನು ನಿಲ್ಲಿಸುವುದಕ್ಕೆ ಸೂಕ್ತ ಕ್ರಮ ಕೈಕೊಳ್ಳಬೇಕು.

Asterisks indicate that remarks or Speeches have not been revised by the member concerned.

ಶ್ರೀ ಕೆ. ಎಚ್. ರಂಗನಾಥ್: ಬೋರ್ಡ್ ಹಾಕುವುದಕ್ಕೆ ಏರ್ಪಾಡು ಮಾಡಲಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ಮೊದಲು ಬಸ್‌ಗಳಲ್ಲಿ ಕಂಪ್ಲೆಂಟ್ ಬಾಕ್ಸ್ ಗಳು ಇರುತ್ತಿದ್ದವು. ಆದರೆ ಈಗ ಅವು ಇಲ್ಲವಾಗಿವೆ. ಏನಾದರೂ ಗಲಾಟೆ ಯಾದರೆ ಮತ್ತು ಸಲಹೆ ಕೊಡಬೇಕಾದರೆ ಇವು ಇಲ್ಲದಿರುವುದರಿಂದ ಪ್ರಯಾಣಿಕರಿಗೆ ಕಷ್ಟವಾಗಿದೆ. ಆದ್ದರಿಂದ ಪ್ರತಿ ಬಸ್‌ನಲ್ಲಿ ಕಂಪ್ಲೆಂಟ್ ಬಾಕ್ಸ್ ಇರುವಂತೆ ನೋಡಿಕೊಳ್ಳಬೇಕು ಮತ್ತು ಯಾರಾದರು ಆ ಬಾಕ್ಸ್‌ಗೆ ಕಾಗದವನ್ನು ಹಾಕಿದರೆ ಅದರ ಬಗ್ಗೆ ತಕ್ಷಣ ವಿಚಾರಣೆ ನಡೆಸುವುದಕ್ಕೆ ಏರ್ಪಾಡು ಮಾಡಬೇಕು.

SRI K. H. RANGANATH: It is a suggestion for action.

ಶ್ರೀ ಬಾಪೂಗೌಡ ರಾಯಪ್ಪ:—ಬಸ್‌ಗಳಲ್ಲಿ ಬೋರ್ಡ್ ಇದ್ದರೂ ಸಹ ಧೂಮಪಾನ ಮಾಡುವವರ ಸಂಖ್ಯೆ ಇತ್ತೀಚೆಗೆ ಜಾಸ್ತಿಯಾಗುತ್ತಿದೆ. ಈ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ ಮತ್ತು ಇಲ್ಲಿಯವರೆಗೆ ಎಷ್ಟು ಕೇಸ್‌ಗಳನ್ನು ಹಾಕಿದ್ದಾರೆಂಬುದನ್ನು ಹೇಳುತ್ತೀರಾ?

ಶ್ರೀ ಕೆ. ಎಚ್. ರಂಗನಾಥ್:— ಧೂಮಪಾನ ಮಾಡಬಾರದೆಂದು ಪ್ರಯಾಣಿಕರಲ್ಲಿ ಕೇಳಿಕೊಳ್ಳಲಾಗಿದೆ. ಆದರೆ ಯಾರಾದರು ಸೇದಿದರೆ ಅವರಿಗೆ ಶಿಕ್ಷೆ ವಿಧಿಸಬೇಕೆಂಬ ಬಗ್ಗೆ ನಿಯಮವಿಲ್ಲ; ಶಿಕ್ಷೆ ವಿಧಿಸಬೇಕೆಂದು ತಾವು ಹೇಳುವುದಾದರೆ ಅದನ್ನು ಸಹ ಮಾಡಬಹುದು: ಆದರೆ ಅದು ಸಾಧುವಾದುದಲ್ಲ ಎಂಬುದು ನನ್ನ ಅಭಿಪ್ರಾಯ.

ಶ್ರೀ ಗಟ್ಟಿ ಚಂದ್ರಶೇಖರ್:— ಬಹಳದೂರದವರೆಗೆ ಪ್ರಯಾಣ ಮಾಡುವವರಿಗೆ ಧೂಮಪಾನ ಮಾಡಲು ಏನಾದರು ಏರ್ಪಾಡು ಮಾಡುತ್ತೀರಾ?

ಶ್ರೀ ಕೆ. ಎಚ್. ರಂಗನಾಥ್: ಧೂಮಪಾನ ಮಾಡಬಾರದು ಎಂದು ಬೋರ್ಡ್‌ಗಳನ್ನು ಹಾಕಿರುವಾಗ ಸೇದುವ ಏರ್ಪಾಡು ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಟಿ. ಆರ್. ಶಾಮಣ್ಣ:— ಡ್ರೈವರ್ ಮತ್ತು ಕಂಡಕ್ಟರ್‌ಗಳು ಧೂಮಪಾನ ಮಾಡುವುದನ್ನು ನಿಲ್ಲಿಸಿದರೆ ಅದು ಪ್ರಯಾಣಿಕರ ಮೇಲೆಯೂ ಸಹ ಪರಿಣಾಮ ಬೀರುತ್ತದೆ. ಆದ್ದರಿಂದ ಡ್ರೈವರ್ ಮತ್ತು ಕಂಡಕ್ಟರ್‌ಗಳು ಧೂಮಪಾನ ಮಾಡುವುದನ್ನು ನಿಲ್ಲಿಸಬೇಕು ಎಂಬ ಬಗ್ಗೆ ಆದೇಶ ಹೊರಡಿಸುವುದು ಒಳ್ಳೆಯದಲ್ಲವೇ?

ಶ್ರೀ ಕೆ. ಎಚ್. ರಂಗನಾಥ್ :— ಆ ಬಗ್ಗೆ ಕ್ರಮ ಕೈಕೊಳ್ಳುತ್ತೇನೆಂದು ಈಗತಾನೆ ಹೇಳಿದ್ದೇನೆ.

ಅಧ್ಯಕ್ಷರು :—ಪ್ರಶ್ನೆ ನಂ 215 ಶ್ರೀಮಾನ್ ವಾಯಿ ಅವರ ಪರವಾಗಿ ಶ್ರೀಮಾನ್ ಬಣಕಾರ್ ಅವರು ಕೇಳಬಹುದು.

H. U. T. D. HEALTH CENTRE

215. Sri B. G. Banakar (Hirekerur) On behalf of Sri V. V. WAI (Shirahatti).—Will the Minister for Health be pleased to state :—.

(*a*) whether it has come to the notice of the Government that H U. T. D. (Heatlh Centres) in North Karnataka are being maintained by the Taluk Local Board and Grama Panchayats ;

(*b*) whether it is not a fact that these Centres in old Mysore area are being maintained by the Goverament;

(*c*) in order to have uniformity in State whether the Governn ent has contemplated to take over the said Centres ;

(*d*) whether the Government would give the financial assistance to the Taluk Development Board to run such Centres ?

Sri H. SIDDAVEERAPPA (Minister for Health)

(*a*) The Taluk Development Board are maintaining the H. U. T. D. (Health Centres) in North Karnataka. The Government is giving 50 per cent of the recurring and non-recurring expenditure.

(*b*) No.

(*c*) The question does not arise as there is uniformity already in the State.

(*d*) Yes.